ವತಿಯಿಂದ ದೊರಕಿರುವುದಿಲ್ಲ. ಈ ಕಾರಣದಿಂದ ಜಿಲ್ಲಾಆಸ್ಪತ್ರೆಯು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗದೆ ಉತ್ತಮ ಸೌಲಭ್ಯದಿಂದ ಶ್ರೀಸಾಮಾನ್ಯ ವಂಚಿತನಾಗುವ ಪರಿಸ್ಥಿತಿ ಇದೆ. ಈ ಕಾರಣದಿಂದ ಜಿಲ್ಲಾ ಆಸ್ಪತ್ರೆ ಅಭಿವೃದ್ಧಿ ಕಾರ್ಯಕ್ಕೆ ಅಡಳಿತಾತ್ಮಕ ಮಂಜೂರಾತಿ ದೊರಕಿಸಿಕೊಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆ ಮಾಡುತ್ತೇನೆ.

ಮಂಡ್ಯ ಜಿಲ್ಲಾ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸುವ ದಿಸೆಯಲ್ಲಿ, ಈಗ ಹಾಲಿ ಇರುವ ಒಳರೋಗಿಗಳ ಕಟ್ಟಡ ಮೇಲೆ ಮಹಡಿ ಕಟ್ಟಡದ ಕಾಮಗಾರಿಯ ಸಲುವಾಗಿ, ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಸದರಿ ಕಾಮಗಾರಿಗೆ ರೂ. 54.00 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಿರುವ ಮೇರೆಗೆ, ನಿರ್ದೇಶಕರು, ಆರೋಗ್ಯ ಮತ್ತು ಕು.ಕ. ಸೇವೆಗಳು, ಇವರು ಅಡಳಿತಾತ್ಮಕ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಸದರಿ ಕಾಮಗಾರಿಗೆ 1993-94ನೇ ಸಾಲಿನ ಆಯವ್ಯಯದಲ್ಲಿ 14.00 ಲಕ್ಷ ರೂ.ಗಳ ಅನುದಾನವನ್ನು 4210 ವೈದ್ಯಕೀಯ ಮತ್ತು ಜನಾರೋಗ್ಯದ ಮೇಲಿನ ಬಂಡವಾಳ ವೆಚ್ಚದಡಿಯಲ್ಲಿ ಸೇರಿರುವುದಲ್ಲದೆ, ಈ ಕೆಳಕಂಡ ಎರಡು ಕೈಗೊಳ್ಳಲಾಗದ ಕಾಮಗಾರಿಗಳಿಗೆ ಅನುದಾನ ಸಹ ಆಯವ್ಯಯದಲ್ಲಿ ಸೇರಿರುತ್ತದೆ.

1. ಫಾರ್ಮಸಿ ಕಟ್ಟಡ ನಿರ್ಮಾಣ ಅಂದಾಜು ವೆಚ್ಚ 3 ಲಕ್ಷ ಅನುದಾನ 3 ಲಕ್ಷ
2. 10 ಹಾಸಿಗೆಗಳ ಡಿ. ಅಡಿಕ್ಷನ್ ಅಂದಾಜು ವೆಚ್ಚ 6 ಲಕ್ಷ ಅನುದಾನ 2 ಲಕ್ಷ

ಈ ಮೇಲಿನ ಕಾಮಗಾರಿಗಳ ಒಟ್ಟು ಅನುದಾನವನ್ನು (19.00 ಲಕ್ಷ) ಸದರಿ ಕಾಮಗಾರಿಯ $\frac{1}{3}$ ಭಾಗದ ಅನುದಾನವನ್ನಾಗಿ ಉಪಯೋಗಿಸಿಕೊಳ್ಳಲು ವರ್ಗಾಯಿಸಿ ಜಿಲ್ಲಾ ಆಸ್ಪತ್ರೆಯ ಮೊದಲನೆ ಮಹಡಿಯ ಕಟ್ಟಡ ನಿರ್ಮಾಣದ ಕಾಮಗಾರಿಯ 54.00 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಅಡಳಿತಾತ್ಮಕ ಅನುಮೋದನೆ ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಯೋಜನಾ ಇಲಾಖೆಗೆ ಸಹಮತಿಗಾಗಿ ಕಳುಹಿಸಿದಾಗ, ಸದರಿ ಇಲಾಖೆಯು ಕೆಲವು ಸ್ಪಷ್ಟೀಕರಣಗಳನ್ನು ಕೇಳಿ ಕಡತವನ್ನು ಹಿಂದಿರುಗಿಸಿದೆ. ಈ ಮಾಹಿತಿಗಳನ್ನು ಯೋಜನಾ ಇಲಾಖೆಗೆ ಕಳುಹಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ನಂತರ ಯೋಜನಾ ಇಲಾಖೆಯ ಸಹಮತಿಯನ್ನು ಪಡೆದು ಕಡತವನ್ನು ಆರ್ಥಿಕ ಇಲಾಖೆಗೆ ಕಳುಹಿಸಿ, ಆ ಇಲಾಖೆಯ ಸಹಮತಿ ದೊರಕಿದ ಕೂಡಲೇ ಅಡಳಿತಾತ್ಮಕ ಮಂಜೂರಾತಿಯನ್ನು ಕೊಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

2. ಜಿಲ್ಲೆಯ ವಿಟ್ಲ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡದ ನಿರ್ಮಾಣ

ಶ್ರೀ ಎ. ರುಕ್ಮಯಪೂಜಾರಿ (ವಿಟ್ಲ) : ಮಾನ್ಯ ಅಧ್ಯಕ್ಷರೆ ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ವಿಧಾನಸಭಾ ಕ್ಷೇತ್ರದ ವಿಟ್ಲದಲ್ಲಿ ಒಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು 1993-94ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು ಈಗ ಮಂಡಲ ಪಂಚಾಯತಿಗೆ ಸೇರಿದ ಕಟ್ಟಡದಲ್ಲಿ ತರಗತಿಗಳು ನಡೆಯುತ್ತಾ ಇರುತ್ತವೆ. ಆದರೆ ಇನ್ನು ಮುಂದೆ ಕಾಲೇಜು ವ್ಯವಸ್ಥಿತವಾಗಿ ನಡೆಯಬೇಕಾದರೆ ಸ್ವಂತ ಕಟ್ಟಡ ಅತಿ ಅಗತ್ಯವಾಗಿ ಬೇಕಾಗಿದೆ. ಆದುದರಿಂದ 1994-95ನೇ ಬಜೆಟ್ಟಿನಲ್ಲಿ ಈ ಕಟ್ಟಡಕ್ಕೆ ಬೇಕಾದ ಹಣವನ್ನು ಸರ್ಕಾರ ಒದಗಿಸಬೇಕಾಗಿ ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರ ಪರವಾಗಿ ಈ ಹೇಳಿಕೆ ಮಾಡುತ್ತೇನೆ :

ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ವಿಧಾನ ಸಭಾ ಕ್ಷೇತ್ರದ ವಿಟ್ಲದಲ್ಲಿ ಒಂದು ಸರ್ಕಾರಿ ದರ್ಜಿ ಕಾಲೇಜನ್ನು ಪ್ರಾರಂಭಿಸಲು 1993-94ನೇ ಸಾಲಿನಲ್ಲಿ ಮಂಜೂರಾತಿ ನೀಡಲಾಗಿದ್ದು, ಕಾಲೇಜು ನಡೆಯುತ್ತಿದೆ. ಕಾಲೇಜಿಗಾಗಿ ಸ್ವಂತ ಕಟ್ಟಡ ಇಲ್ಲದ ಕಾರಣ ಮಂಡಲ ಪಂಚಾಯತ್ ಕಟ್ಟಡದಲ್ಲಿ ತರಗತಿಗಳನ್ನು ನಡೆಸಲಾಗುತ್ತಿದೆ. ಇದಕ್ಕೆ ಒಂದು ಸ್ವಂತ ಕಾಲೇಜು ಕಟ್ಟಡ ಒದಗಿಸುವುದು ಅಗತ್ಯ. ಆದರೆ ವಿಟ್ಲ ಕಾಲೇಜಿಗೆ ಇನ್ನೂ ನಿವೇಶನ ದೊರಕಿರುವುದಿಲ್ಲ. ನಿವೇಶನ ದೊರೆತ ನಂತರ ಕಟ್ಟಡದ ಬಾಬ್ತು ಆಯವ್ಯಯದಲ್ಲಿ ಒದಗಿಸಲು ಏರ್ಪಾಡು ಮಾಡಲಾಗುವುದು.

3. ಕರ್ನಾಟಕ ರಾಜ್ಯದಲ್ಲಿನ ಕುಮ್ಕಿ, ಕಾನಾ, ಬಾಣೆ ಅರಣ್ಯ ಜಮೀನು ಬಗರ್ ಹುಕುಂ ಮಂಜೂರಾತಿಗೆ ಅರ್ಜಿಸಲ್ಲಿಸಲು ಕಾಲಾವಧಿ ವಿಸ್ತರಣೆ

ಶ್ರೀ ಕೆ. ಕುಶಾಲ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿನ ಬಗರ್ ಹುಕುಂ ಸಾಗುವಳಿದಾರರಾದ ಬಡ ಕೃಷಿ ಕೂಲಿಕಾರ್ಮಿಕ ರೈತರಿಗೆ ಕುಮ್ಕಿ, ಕಾನಾ ಬಾಣೆ ಅರಣ್ಯ ಜಮೀನುಗಳನ್ನು ಮತ್ತು ಅನಾಧೀನ ಪೊರಂಬೋಕ್ ಭೂಮಿಗಳ ದರಕಾಸ್ತು ಮಂಜೂರಾತಿ ನೀಡಲು ಅಕ್ರಮ ಸಕ್ರಮ ಸಮಿತಿಗಳಿಗೆ ಕಾನೂನಿನ ಅವಕಾಶವಿರುವುದಿಲ್ಲ. ಇದರಿಂದ ರೈತರಿಗೆ ತುಂಬಾ ಅನ್ಯಾಯವಾಗಿದೆ. ಆದುದರಿಂದ ಸದ್ರಿ ಮೇಲೆ ಹೇಳಿದ ಸರಕಾರಿ ಭೂಮಿಗಳನ್ನು ಮಂಜೂರಾತಿ ಮಾಡಲು ಈ ತನಕ ಅರ್ಜಿ ಸಲ್ಲಿಸಿದ್ದ ರೈತರಿಗೆ ಅರ್ಜಿಸಲ್ಲಿಸಲು ಹೆಚ್ಚಿನ ಕಾಲಮಿತಿಯನ್ನು ನೀಡಲು ಸರ್ಕಾರ ಕೂಡಲೇ ಕಾನೂನು ಮಾಡುವಂತೆ ಈ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳನ್ನು ಒಂದು ಸಭೆಗೆ ಕರೆಸಿದ್ದೇನೆ. ಅದರಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ವಿಷಯವನ್ನು ಸಹ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

4.ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಡಾ ಪ್ರಾಧಿಕಾರದ ನೌಕರರಿಗೆ ಸೇವಾ ಸೌಲಭ್ಯ

ಶ್ರೀ ಮನೋಹರ ಐನಾಪೂರ (ಬಳ್ಳೊಳ್ಳಿ) : ಮಾನ್ಯ ಅಧ್ಯಕ್ಷರೇ "ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಡಾ ಪ್ರಾಧಿಕಾರದಿಂದ ಖಾಯಂ ಆಗಿ ನೇಮಕಾತಿ ಹೊಂದಿ ಹತ್ತು ವರ್ಷಗಳಿಂದಲೂ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಕಾಡಾ ಕಾಯ್ದೆ 1980ರ ನಿಯಮ 5(2)ರ ಪ್ರಕಾರ ಸರ್ಕಾರಿ ನೌಕರರಿಗೆ ಸಿಗಬೇಕಾದ ಯಾವತ್ತು ಸೇವಾ ಸೌಲಭ್ಯಗಳು ಇದೂವರೆವಿಗೂ ದೊರೆಯುತ್ತಿರುವುದಿಲ್ಲ. ಈಗಾಗಲೇ ಸೇವೆಯಲ್ಲಿದ್ದು ಮರಣ ಹೊಂದಿರುವ ನಾಲ್ಕು ಸಿಬ್ಬಂದಿಗಳ ಅವಲಂಬಿತರಿಗೂ ಯಾವುದೇ ಕುಟುಂಬ ಪಿಂಚಣಿ ಮತ್ತಿತರ ಆರ್ಥಿಕ ಸೌಲಭ್ಯಗಳು ದೊರೆಯದೇ ಇರುವುದು ದುರಾದೃಷ್ಟಕರ.

ಆದುದರಿಂದ ಈಗಾಗಲೇ ಮರಣ ಹೊಂದಿರುವ ಕೃಷ್ಣಾ ಕಾಡಾ ನೌಕರರ ಅವಲಂಬಿತರಿಗೆ ಹಾಗೂ ಈ ಸಧ್ಯ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಸರ್ಕಾರಿ ನೌಕರರಿಗೆ ಇರುವ ಎಲ್ಲಾ ಸವಲತ್ತುಗಳನ್ನು ವಿಸ್ತರಿಸುವ ಕ್ರಮ ಯಾವತ್ತು ಕೈಗೊಳ್ಳುವಿರಿ? ಹಾಗಿದ್ದಲ್ಲಿ ನಿರ್ದಿಷ್ಟ ಅವಧಿ ತಿಳಿಸುವಿರಾ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ. ಕಾಡಾ ಕಾಯ್ದೆಗನುಗುಣವಾಗಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಹೊರಡಿಸಬೇಕಾಗಿದ್ದು